ಕೂಸುಗಳೊಂದಿಗೆ ನಡೆದಿದ್ದಾಳೆ. ದಾರಿ ದೂರ. ಮಧ್ಯರಾತ್ರಿ ತವರಿಗೆ ಬಂದರೆ ಅಪ್ಪ ಮಲತಾಯಿಯ ತೋಳಲ್ಲಿ. ಅಣ್ಣ ಹೆಂಡತಿಯ ಕಣ್ಣಲ್ಲಿ, ತಂಗಿ ತನ್ನವನ ಮಗ್ಗುಲಲಿ. ಅಂಗಳದಲ್ಲಿ ಆಸರೆಯೇ ಇಲ್ಲದೇ ನಿಂತವಳ ಕಣ್ಣೀರು ಮಳೆಯಾಗಿದೆ. ಹೆಣ್ಣಿನ ಬೇಗುದಿಯ ಕಣ್ಣೀರೆ ಉತ್ತರೆ ಮಳೆಯಾಯಿತೆಂಬುದು ಜನಪದ ಕಥೆ. ಸಂಶಯದ ಸುಳಿಯಲ್ಲಿ ಹೆಣ್ಣೊಂದು ಸಾಯುವ ನೋವಿಗೆ ಕೊನೆಯಿಲ್ಲ. ಅಂದು ಇಂದು ನಡೆದೇ ಇದೆ.

ಮಳೆಯಲ್ಲಿ ನಕ್ಷತ್ರಗಳು ಮಿನುಗುವುದಿಲ್ಲ. ಬೇಕಿದ್ದರೆ ಮಳೆಯಲ್ಲಿ ಮುಗಿಲನ್ನೊಮ್ಮೆ ದಿಟ್ಟಿಸಿ ನೋಡಿ. ನಕ್ಷತ್ರಗಳಿಗೂ ಮಳೆಗೂ ನಂಟಿದೆ ಎಂಬ ಜ್ಞಾನಕ್ಕೆ ಕರ್ತೃ ಆರನೇ ತರಗತಿಯ ಆಲಗೂರು ಮಾಸ್ತರರು. ಮಿನುಗುವುದು ಸುಲಭದ್ದಲ್ಲವೆಂದೇ ಶಿಲೆಯಂತ ನಮ್ಮನ್ನು ಕಟೆದು ವಜ್ರ ಮಾಡಬೇಕೆಂದರು. ಶಿಲಾ ಬಾಲಿಕೆಯರಾಗಲು ಕೆತ್ತಿಸಿಕೊಳ್ಳಲಿಲ್ಲ ನಾವು. ವಜ್ರವಾಗದಿದ್ದರೂ ಆಕಾರ ಪಡೆದೆವು. ಅಂದು ಶಾಲೆಯಲ್ಲಿ ಮಳೆ ನಕ್ಷತ್ರಗಳ ಪಾಠ. ನಾವೆಲ್ಲಾ ಚಂದದಿ ಮಿನುಗುವ ನಕ್ಷತ್ರಗಳು. ಗೋಲಾಕಾರದಲ್ಲಿ ನಿಂತಿದ್ದೆವು. ಮೊದಲ ನಕ್ಷತ್ರ ಅಶ್ವಿನಿ. ನನ್ನಿಂದಲೇ ಪ್ರಾರಂಭ. ಸಾಮ್ಯವೇ ಇಲ್ಲ. ರಾಶಿ, ನಕ್ಷತ್ರ, ತಿಥಿ, ವಾರ ನೋಡಿಯೇ ಕೈಹಿಡಿದ ಗಂಡ ನಡುಮಧ್ಯಾಹ್ನವೇ ಮಿನುಗುವ ನಕ್ಷತ್ರವಾದ. ಒಬ್ಬೊಬ್ಬರಿಗೆ ಒಂದೊಂದು ನಕ್ಷತ್ರದ ಹೆಸರು. ನನ್ನ ಅಂಕಿತನಾಮದ ಮೊದಲಕ್ಷರ 'ಲ'. ನಕ್ಷತ್ರ ಪ್ರಾರಂಭವಾಗುವುದು ವರ್ಣಮಾಲೆಯ 'ಅ'ದಿಂದ. ಕಾಕತಾಳೀಯವಾಗಿ ಒಲಿದು ಬಂತೋ ಏನೋ...? ಕರಬರ ತಲೆ ಕೆದರಿ ಕೊಂಡೆನೆನ್ನಿ. ಅಶ್ವಿನಿ ಮೊದಲ ಮಳೆ ನಕ್ಷತ್ರ. ಅಶ್ವಿನಿ ಹೆಸರು ಶುರುವಿಟ್ಟುಕೊಂಡೆ. ಹೇಳದಿದ್ದರೆ ಕೈಯಲ್ಲಿ ಕೋಲು. ಹೆದರಿಸುವುದಕ್ಕೆ ಬಾರಿಸುದಕ್ಕಲ್ಲ. ಕೋಲು ತೋರಿಸಿಯೇ ಬಡಿಗೆಯಾಡಿಸಿ ನೂರಾರು ತಲೆಮಾರಿನಿಂದ ನಮ್ಮ ತಲೆ ಜಾಲಾಡಿಸಿದ್ದು ಬೇರೆ ಮಾತು. ತಲೆಯಾಡಿಸಿದೆ ಅಶ್ವಿನಿಯಾಗಿ. ಪಕ್ಕದಲ್ಲಿದ್ದ ಬೇಬಿ ಭರಣಿ, ಕಸ್ತೂರಿಗೆ ಕೃತಿಕಾ, ರೇಣುಕಾಗೆ ರೋಹಿಣಿ, ಮಲ್ಲವ್ವಗೆ ಮೃಗಶಿರಾ, ಅಮರವ್ವಗೆ ಆರ್ದ್ರಾ, ಪಾರುಗೆ ಪುನರ್ವಸು, ಪುಷ್ಪಾಗೆ ಪುಷ್ಯ, ಆಶಾಗೆ ಆಶ್ಲೇಷಾ, ಹಸನವ್ವಗೆ ಹಸ್ತಾ, ಸರಸ್ವತಿಗೆ ಸ್ವಾತಿ, ಅನ್ನಪೂರ್ಣಗೆ ಅನುರಾಧ, ಶರಣವ್ವಗೆ ಶತತಾರ... ಹೀಗೆ ಒಬ್ಬೊಬ್ಬರು ತಮ್ಮ ಹೆಸರನ್ನು ಮೊದಲಕ್ಷರವಾಗಿ ಹೇಳುತ್ತಾ ಹೋದರೆ, ನಕ್ಷತ್ರಗಳಾಗಿ ನಾವು. ಎಲ್ಲಾ ನಕ್ಷತ್ರಗಳು 27 ನಿಮಿಷದಲ್ಲಿ ಕಂಠಸ್ಥ. ಹೀಗಾಗಿಯೇ ನಾವೇ ನಕ್ಷತ್ರಗಳಾಗಿ ಮಿನುಗುತ್ತಿದ್ದೆವು.

ಆಗ ಮಗನಿಗಿನ್ನು ಮೂರ್‍ನಾಲ್ಕು ವರ್ಷ. ಬೆಳಗಿನ ಜಾವ. ಧಾರಾಕಾರ ಬೀಳುವ ಮಳೆಯಲ್ಲಿ ಕುಯ್ಯಗುಟ್ಟುವ ಸದ್ದು ಕೇಳಿದೆ. ಹಾಸಿಗೆಯಿಂದ ಎದ್ದು ಮರಿಯೊಂದನ್ನು ತಂದು ಚಾದರದೊಳಗೆ ತನ್ನ ಮಗ್ಗಲು ಮಲಗಿಸಿಕೊಂಡಿದ್ದಾನೆ. ಆ ಮರಿ ನೋಡಿ ಹಿರಿಯ ಹೆಣ್ಣುಮಗಳಿಂದ ಮನೆಯಲ್ಲಿ ಗುಡುಗು, ಮಿಂಚು, ಸಿಡಿಲು. ಹೊರಗೆ ಮಾತ್ರ ಸುರಿಯುತ್ತಿದ್ದ ಮಳೆ ಒಳಗೆ ಶುರುವಾಯಿತು. ಚಾಟಿನಲ್ಲಿದ್ದರೂ ಅಕ್ಷರಶಃ ತೋಯಿಸಿಕೊಂಡೆ. ಅಕ್ಕೋರಾದರೇನು ಬಂತು. ಮನಿಶಾಲಿ ಮೊದಲು ಚೋಲೋ ಇರಬೇಕು. ಮಂದಿ ಮಕ್ಕಳಣ್ಣ ಶ್ಯಾಣೇರ ಮಾಡುದಲ್ಲ. ಮೊದಲು ಮನ್ಯಾಗಿನ ಮಕ್ಕಳನ್ನು ಶ್ಯಾಣೇರ ಮಾಡಬೇಕು... ಮಕ್ಕಳಿಗೆ ಯಾವುದಾವುದು ಮಗ್ಗಲ ಇಟಕೋಬೇಕಂತ ಹೇಳಾಕ ಬರಂಗಿಲ್ಲ. 'ಮಕ್ಕಳು ಹಂದಿ ಮರಿ ತಂದು ಮಗ್ಗಲ ಕರಕೊಂಡು ಮಕ್ಕೋತಾವ. ಇವು ಏನು ಕರಕೊಂಡು...' ಎಂದಾಗ ಅರ್ಥ ತಿಳಿದ ನನ್ನ ಕಣ್ಣಲ್ಲಿ ಹನಿ. ಹಂದಿ ಮರಿಗೂ, ಕೂಸುಮರಿಗೂ ವ್ಯತ್ಯಾಸ ತಿಳಿಯದ ಮಗ, ಕೂಸೆಂದೇ ತಿಳಿದಿದ್ದ. ಜಿನುಗುವ ಮಳೆ ಹನಿ ಅವನಿಗೆ ಮಮತೆಯ ಪಾಠ ಕಲಿಸಿತ್ತು. 'ಹರಿಯುತಿದೆ ಎದೆಯಿಂದ ಎದೆಗೆ ಸತತ' ಅಡಿಗರ ಸಾಲಿನಂತೆ ಅವನೆದೆಯಲ್ಲಿ ಅಮೃತವಾಹಿನಿಯ ಹರಿವಿತ್ತು. ಮಗುವಿನಲ್ಲಿ ಕರುಣೆಯ ರಸ. ಆರು ದಶಕಗಳ ಮಳೆ ವಸಂತ ಕಂಡವರಲ್ಲಿ ರೌದ್ರವಿಷ. ಮಗನ ಬಗ್ಗೆ ಹೆಮ್ಮೆ ಎನಿಸಿತು. ಸುರಿವ ಮಳೆಯಲ್ಲೂ ಮರಿಯನ್ನು ಚಾಟಿಗೆ ಬಿಟ್ಟು ಬಂದೆ. ಅದರ ಮುಂದೆ ಬೌಲಲ್ಲಿ ಹಾಲಿಟ್ಟು ಬರುವುದನ್ನು ಮರೆಯಲಿಲ್ಲ. ಈಗಲೂ ನನಗೊಂದು ದೊಡ್ಡ ಪಾಠವಿದು. ಮನ ಕಲಕುತ್ತದೆ. ಹಂದಿ ಹಾಲ ಕುಡಿಯುತ್ತಾ, ಅಂದವರಿಗೆ, 'ಹೊಲಸಿಗೂ ಹಾಲಿಗೂ ವ್ಯತ್ಯಾಸ ತಿಳಿಯದ ಮರಿ ವಿಷವಿಟ್ಟರೂ ಕುಡಿಯುತ್ತೆ' ಎಂದು ಹೇಳಿ ಒಳಬಂದೆ. ಯಾಕೋ ಹೊರಗೆ ಮಳೆ ಸದ್ದು ಕೇಳಿಸಲಿಲ್ಲ. ಮಗನಿಗೀಗ ಮಕ್ಕಳು